ಓ ಎಸ್ ನಂ.597/2018

ಪಿ ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ದಿನಾಂಕಃ 11-02-2021.

**ಪಾಟೀ ಸವಾಲು ಃ-** ಎಸ್ ಎಸ್ ಪಿ ವಕೀಲರಿಂದ

ನಮ್ಮ ತಂದೆಗೆ ನಾವು ಐದು ಜನ ಮಕ್ಕಳು. ನಾವುಗಳು ಮದುವೆಯಾಗಿ ಸುಮಾರು 5 ವರ್ಷಗಳಿಂದ ಬೇರೆ ಬೇರೆ ವಾಸವಾಗಿದ್ದೇವೆ .ಪ್ರತಿವಾದಿಯರ ತಂದೆ ನಿಂಗಪ್ಪರವರನ್ನು ನೋಡಿರುತ್ತೇನೆ . ಸದರಿಯವರು ತೀರಿಕೊಂಡಿರುತ್ತಾರೆ . ಸದರಿಯವರಿಗೆ ಒಟು 6 ಜನ ಗಂಡು ಮಕ್ಕಳು . ಅವರ ಪೈಕಿ ಹಿರಿಯ ಮಗ ನಾಗರಾಜು ತೀರಿಕೊಂಡಿರುತ್ತಾರೆ . ಸದರಿ ನಾಗರಾಜು ತೀರಿಕೊಂಡ ದಿನಾಂಕ ನೆನಪಿಲ್ಲ. ಲಿಂಗಪ್ಪರವರು ದಿನಾಂಕ **04-09-1999** ರಲ್ಲಿ ತೀರಿಕೊಂಡಿದ್ದಾರೆ . ಲಿಂಗಪ್ಪ ಮೂಲತಹ ತಾವರೆಕೆರೆ ಗ್ರಾಮದ ವಾಸಿ ಎಂದರೆ ಸರಿ . ನಮ್ಮ ಸ್ವಂತ ಊರು ಅರೆಸೋಮನಹಳ್ಳಿ ಗ್ರಾಮ . ಪ್ರಸ್ಥುತ ಅರೆಸೋಮನಹಳ್ಳಿಯಲ್ಲಿ ವಾಸವಾಗಿದ್ದೇವೆ . ನನ್ನ ತಂದೆಯನ್ನು ಬಡಕನಹಳ್ಳಿ ಸಿದ್ದೇಗೌಡರು ಎಂದು ಕರೆಯುತ್ತಾರೆ . ನಮ್ಮ ಚಿಕ್ಕವಯಸ್ಸಿನಲ್ಲಿ ನನ್ನ ತಂದೆ ಬಡಕನಹಳ್ಳಿಯಲ್ಲಿ ವಾಸವಾಗಿದ್ದರು. ಲಿಂಗಪ್ಪರವರು ಮೂಲತಹ ಜಮೀನ್ದಾರರು ಎಂದರೆ ಸರಿ . ಅವರಿಗೆ ಎಷ್ಟು ಎಕರೆ ಜಮೀನು ಇತ್ತು ಎಂದು ಗೊತ್ತಿಲ್ಲ. ಲಿಂಗಪ್ಪ ರವರು ಲಿಂಗಾಯಿತ ಸಮೂದಾಯಕ್ಕೆ ಸೇರಿದವರು ಎಂದರೆ ಸರಿ .

ತಾವರೆಕೆರೆಯಲ್ಲಿ ಒಕ್ಕಲಿಗ ಸಮೂದಾಯ ಹೆಚ್ಚು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಲಿಂಗಾಯಿತ ಸಮೂದಾಯ ಹೆಚ್ಚು ಇದೆ ಎಂದು ನುಡಿಯುತ್ತಾರೆ . ಸದರಿ ಲಿಂಗಪ್ಪರವರಿಂದ ನನ್ನ ತಂದೆ ಜಮೀನುಗಳನ್ನು ಕ್ರಯಕ್ಕೆ ಪಡೆದಿದ್ದಾರೆ . ಲಿಂಗಪ್ಪನ ಸಂಪೂರ್ಣ ಆಸ್ತಿಯನ್ನು ಕೊಂಡು ಕೊಂಡಿದ್ದೇವೆ . ಕೆಲವು ಸ್ವತ್ತುಗಳು ನೋಂದಣಿಯಾಗಿದ್ದು ಕೆಲವು ಸ್ವತ್ತುಗಳು ಕರಾರು ಆಗಿವೆ . ಒಂದೇ ದಿನಾಂಕದಂದು ಎಲ್ಲಾ ಸ್ವತ್ತುಗಳಿಗೂ ಸಂಬಂಧಿಸಿದಂತೆ ಕ್ರಯೇದ ವ್ಯವಹಾರಗಳು ಆಗಿರುತ್ತದೆ .

ಕ್ರಯಪತ್ರಗಳ ದಿನಾಂಕ ನೆನಪಿಲ್ಲ ಆದರೆ 1981-82 ನೇ ಸಾಲಿನಲ್ಲಿ ಆಗಿವೆ . ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟೆ ಎಷ್ಟು ವಿಸ್ತೀರ್ಣ ಕ್ರಯಕ್ಕೆ ಪಡೆದಿದ್ದೀರಿ ಎಂದರೆ ಸಾಕ್ಷಿಯು ನೋಡಿ ಹೇಳಬೇಕು ಎಂದುನುಡಿಯುತ್ತಾರೆ . ಎಷ್ಟು ಸ್ವತ್ತುಗಳು ಕ್ರಯವಾಗಿದೆ ಎಂದರೆ ಸಾಕ್ಷಿಯು ದಾಖಲಾತಿ ನೋಡಿ ಹೇಳಬೇಕೆಂದು ನುಡಿಯುತ್ತಾರೆ .

ನೋಂದಣಿಯಾಗಿರುವ ಎಲ್ಲಾ ಸ್ವತ್ತುಗಳು ನನ್ನ ತಾಯಿಯ ಹೆಸರಿಗೆ ಖಾತೆಯಾಗಿವೆ . ನನ್ನ ತಂದೆಗೆ ತಾವರೆಕೆರೆ ಗ್ರಾಮದ ಸರ್ವೆ ನಂಬರ್ ಗಳಲ್ಲಿ ಸುಮಾರು 10 ಎಕರೆ ಜಮೀನು ಇದೆ .ಬಡಕನಹಳ್ಳಿಯಲ್ಲಿ ಸುಮಾರು 15 ಎಕರೆ ಜಮೀನು ಇದೆ . ವಳಗೆರೆಸೋಮನಹಳ್ಳಿಯಲ್ಲಿ 5 ಎಕರೆ ಜಮೀನು ಇದೆ . ನನ್ನ ತಂದೆ 2013 ರಲ್ಲಿ ತೀರಿಕೊಂಡಿರುತ್ತಾರೆ . ನನ್ನ ತಾಯಿ 2008 ರಲ್ಲಿ ತೀರಿಕೊಂಡಿದ್ದಾರೆ .

ನಾವು ಐದು ಜನ ಸಹೋದರರರು ನಮ್ಮ ಕುಟುಂಬದ ಆಸ್ತಿಗಳನ್ನು ಮೌಖಿಕವಾಗಿ ವಿಭಾಗಮಾಡಿಕೊಂಡಿದ್ದೇವೆ .

ಲಿಂಗಪ್ಪರವರು ಕೆಲವು ಸ್ವತ್ತುಗಳನ್ನು ದಾಸೇಗೌಡ ಬಿನ್ ಚಿಕ್ಕೇಗೌಡರವರಿಗೆ ಮಾರಾಟಮಾಡಿರುತ್ತಾರೆ . ಹಾಗೂ ನನ್ನ ಚಿಕ್ಕಪ್ಪ ಬಿ ಎನ್ ಶ್ರೀಕಾಂತ್ ರವರಿಗೆ ಕೆಲವು ಸ್ವತ್ತುಗಳನ್ನು ಮಾರಾಟಮಾಡಿರುತ್ತಾರೆ . ನನ್ನ ತಾಯಿಗೆ ಕ್ರಯವಾದ ಸಮಯದಲ್ಲಿ ಮಾರಾಟಮಾಡಿರುತ್ತಾರೆ .

ಲಿಂಗಪ್ಪರವರ ಸೊಸೆ ನಂಜಮ್ಮ ಮೊದಲು ಗೊತ್ತಿರಲಿಲ್ಲ ಈಗ್ಗೆ 5 ವರ್ಷಗಳಿಂದಚೀಗೆ ಗೊತ್ತು . ನನ್ನ ಚಿಕ್ಕಪ್ಪನಿಗೆ ಕ್ರಯವಾಗುವ ಕಾಲಕ್ಕೆ ನಾವು ಒಟ್ಟಾಗಿ ಇದ್ದೆವು. ಆಗ ನನಗೆ 16 ವರ್ಷಗಳಾಗಿತ್ತು . ಸದರಿ ನಂಜಮ್ಮ ದಾವೆ ಹಾಕಿ ನಮ್ಮ ಸ್ವತ್ತುಗಳನ್ನು ಹರಾಜು ಮಾಡಲು ಬಂದಾಗ ತಿಳಿಯಿತು . ಸದರಿ ನಂಜಮ್ಮ ಏನು ದಾವೆ ಸಲ್ಲಿಸಿದ್ದರು ಎಂದು ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಹರಾಜಿಗಾಗಿ ಬಂದಿತು ಎಂದು ಗೊತ್ತಿಲ್ಲ.

ಓ ಎಸ್ ನಂ.597/2018

ಪಿ ಡಬ್ಲ್ಯೂ-1

ಓ ಎಸ್ 341/1984 ಯಾವಾಗ ಮುಗಿಯಿತು ಎಂದು ಗೊತ್ತಿಲ್ಲ. ಓ ಎಸ್ ನಂ.315/1996 ಯಾವಗ ಮುಗಿಯಿತು ಎಂದು ಗೊತ್ತಿಲ್ಲ ಹಾಗೂ ಜಾರಿ ಸಂಖ್ಯೆ 75/1996 ಯಾವಾಗ ಮುಗಿದಿದೆ ಎಂದು ಗೊತ್ತಿಲ್ಲ.

ಓ ಎಸ್ ನಂ.341/1984 ನ್ನು ನಂಜಮ್ಮ ಸಲ್ಲಿಸಿದ್ದರು. ನಂಜಮ್ಮನ ಗಂಡ ಕುಮಾರಸ್ವಾಮಿ ಗೊತ್ತು . ಸದರಿ ನಂಜಮ್ಮ ತನ್ನ ಗಂಡನ ವಿರುದ್ಧ ಜೀವನಾಂಶ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ . ಲಿಂಗಪ್ಪನ ಎಲ್ಲಾ ಸ್ವತ್ತುಗಳನ್ನು ಸದರಿ ದಾವೆಯಲ್ಲಿ ಸೇರಿಸಿದ್ದರು ಎಂದರೆ ಸರಿ . ಮೇಲ್ಕಂಡ ದಾವೆಯಲ್ಲಿ ನನ್ನ ತಾಯಿ ನನ್ನ ಚಿಕ್ಕಪ್ಪ ರವರನ್ನು ಪಕ್ಷಗಾರರನ್ನಾಗಿ ಮಾಡಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ನನ್ನ ಚಿಕ್ಕಪ್ಪ ಏನು ಲಿಖಿತ ಹೇಳಿಕೆ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ಸದರಿ ದಾವೆ ದಿನಾಂಕ 1-12-1988 ರಲ್ಲಿ ಡಿಕ್ರಿಯಾಗಿದೆ ಎಂದರೆ ಸರಿ . ಓ ಎಸ್ ನಂ.315/1996 ಡಿಕ್ರಿಯಾಗಿದೆ ಎಂದರೆ ಸರಿ .

ಮೇಲ್ಕಂಡ ದಾವೆಗಳು ಮುಕ್ತಾಯವಾದ ನಂತರ ಯಾವ ಕಾರಣಕ್ಕಾಗಿ ದಾವೆ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಜಾರಿ ಕೇಸು ಚಾಲ್ತಿಯಲ್ಲಿದೆ ಎಂದು ನುಡಿಯುತ್ತಾರೆ . ಜಾರಿ ಸಂಖ್ಯೆ 24/2013, 79/2017 ಚಾಲ್ತಿಯಲ್ಲಿವೆ .

ಮುಂದುವರೆದ ಪಾಟೀ ಸವಾಲಿಗಾಗಿ ಸಮಯವಕಾಶ ಕೋರಿದ್ದು ನೀಡಲಾಯಿತು .

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಎಸ್.ಚಿನ್ನಸ್ವಾಮಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.